# ಶಾಸ್ತ್ರೀಯ ಭಾಷೆ ಮತ್ತು ರಾಜಕೀಯ ಚಿಂತನೆ



ಪ್ರಬಲ ರಾಜಕೀಯ ಸಂಕಲ್ಪ ಮತ್ತು ಇಚ್ಛಾಶಕ್ತಿಯ ಬೆಂಬಲ ಇಲ್ಲದೆ ಭಾಷೆ, ಸಾಹಿತ್ಯ, ಕಲೆ ಸೇರಿ ಒಟ್ಟಾರೆ ಸಂಸ್ಕೃತಿ ಎಂದೂ ಅರಳಲಿಲ್ಲ ಎಂಬ ಸತ್ಯಕ್ಕೆ ಇತಿಹಾಸದುದ್ದಕ್ಕೂ ನಿದರ್ಶನಗಳಿವೆ. ಅಷ್ಟೇ ಏನು, ಮತಧರ್ಮಗಳು ಕೂಡ ಅದರಿಂದಲೇ ಬೆಳೆದು ಉಳಿದವು. ಒಟ್ಟಿನಲ್ಲಿ ಮನುಷ್ಯರ ಬದುಕಿನ ಸಾಂಸ್ಕೃತಿಕ ಸ್ವರೂಪ ಹೇಗಿರಬೇಕು ಅನ್ನುವುದು ಯಾವ ಕಾಲಕ್ಕೂ ಒಂದು ರಾಜಕೀಯ ನಿರ್ಧಾರ.

ಪ್ರಭುತ್ವದ ಹಾಗೆ ಪ್ರಜಾಪ್ರಭುತ್ವದಲ್ಲೂ ಭಾಷೆಯ ವಿಚಾರಕ್ಕೆ ಇದು ಬಹಳ ನಿಜ. ಆದರೆ ಭಾಷೆ ಕುರಿತ 'ರಾಜಕೀಯ' ವೇ ಬೇರೆ. ಭಾರತದ ಬಹುತ್ವಕ್ಕೆ ಸಾಕ್ಷಿಯಾಗಿರುವ 1562 ಭಾಷೆಗಳಲ್ಲಿ, ಪ್ರತಿಯೊಂದೂ ರಾಜಕೀಯ ಆಯಾಮಗಳಲ್ಲೇ ಬದುಕಿದೆ. ಇನ್ನು ಸ್ವಾತಂತ್ರ್ಯ ಬಂದ ನಂತರ ಹಿಂದೂಸ್ತಾನಿ ಭಾಷೆಯನ್ನು ಹಿಂದಕ್ಕೆ ತಳ್ಳಿದ್ದು, ಹಿಂದಿಯನ್ನು ರಾಷ್ಟ್ರೀಯ ಭಾಷೆಯಾಗಿ ಹೇರಲು ಪ್ರಯತ್ನಿಸಿದ್ದು, ಉರ್ದು ಭಾಷೆಗೆ ಶಾಶ್ವತವಾಗಿ ಧರ್ಮದ ನಂಟು ಲೇಪಿಸಿದ್ದು ಮುಂತಾದುವೆಲ್ಲ ನಡೆದಿವೆ. ಇನ್ನು 'ಶಾಸ್ತ್ರೀಯ ಭಾಷೆ' ಎಂಬ ಘೋಷಣೆ ಕೂಡ ರಾಜಕೀಯ ಒತ್ತಡಗಳು ಹೆತ್ತ ಕೂಸಾಗಿದೆ. 2004 ರಲ್ಲಿ ತಮಿಳು ಭಾಷೆಗೆ ಮಾತ್ರ ದೊರೆತಿದ್ದ ಶಾಸ್ತ್ರೀಯ ಭಾಷೆಯ ಮಾನ್ಯತೆ 2008 ರಲ್ಲಿ ಕನ್ನಡಕ್ಕೂ ಸಿಕ್ಕಿದೆ. ಅದರ ಹೆಸರಿನಲಿ ಈ ಐದು ವರ್ಷಗಳಲ್ಲಿ ಕೆಲವು ಹಳೆಯ ಸಂಸ್ಥೆಗಳಿಗೆ ಕೋಟಿ ಕೋಟಿ ಹಣ ದಕ್ಕಿದ್ದು ಬಿಟ್ಟರೆ ಕನ್ನಡಕ್ಕೇನು ಹೊಸತು ಸಿಕ್ಕಿತು ಅನ್ನುವುದು ಯಾರಿಗೂ ಗೊತ್ತಿಲ್ಲ.

ತಮಿಳುನಾಡಿನ ಮಾದರಿಯಲ್ಲಿ ಶಾಸ್ತ್ರೀಯ ಕನ್ನಡ ಭಾಷೆಗಾಗಿ ಪ್ರತ್ಯೇಕ ಕೇಂದ್ರೀಯ ಸಂಸ್ಥೆಯ ಸ್ಥಾಪನೆಗೆ ಸರ್ಕಾರ ಆಶಿಸಿದೆ. ಅಷ್ಟು ಮಾತ್ರವಲ್ಲದೆ ಕನ್ನಡಕ್ಕೆ ಈಗ ಮುಖ್ಯವಾಗಿ ಬೇಕಾಗಿರುವುದು ರಾಜಕೀಯ ನಿರ್ಧಾರಗಳ ಬೆಂಬಲ. ಕನ್ನಡ ಭಾಷೆಯ ಅತಿಹಿಂದಿನ ಶಾಸ್ತ್ರೀಯತೆಯನ್ನು 'ಭದ್ರ' ಪಡಿಸುವುದರ ಜೊತೆಗೆ, ಇಂದು ಮತ್ತು ಮುಂದಿನ ಪೀಳಿಗೆಗಳ ಮಕ್ಕಳ ಬದುಕಿಗೆ ಕನ್ನಡವನ್ನು ಬೆಸೆಯುವ ರಾಜಕೀಯ ಚಿಂತನೆಗೆ ಈಗ ಆದ್ಯತೆ ದೊರೆಯಬೇಕು. ಇಲ್ಲದಿದ್ದರೆ 'ಕನ್ನಡ ಮತ್ತು ಸಂಸ್ಕೃತಿ' ಅನ್ನುವುದು ಬರೀ ಒಂದು ಇಲಾಖೆಯ ಹೆಸರಾಗಿ ಉಳಿಯುತ್ತವಷ್ಟೆ!

● ಆರ್. ಪೂರ್ಣಿಮಾ